ಸಿ. ಸಿ. ನಂ.- **2526/2019**

ಪಿ.ಡಬ್ಲ್ಯೂ- **1**

ಸಾಕ್ಷಿಯು ದಿನಾಂಕಃ **04-08-2022** ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟಿ ಸವಾಲು ಆರೋಪಿ ಪರ ಶ್ರೀ ಕೆ. ವಾಯ್ ವಕೀಲರಿಂದಃ

ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ ಆದರೆ, ಕನ್ನಡ ಬರುವುದಿಲ್ಲ. ನಾನು ದೂರಿನಲ್ಲಿ ತಿಳಿಸಿದ ಎಲ್ಲ ಸಂಗತಿ ನನಗೆ ಗೊತ್ತು. ಆರೋಪಿ **2005** ರಿಂದ ನನ್ನ ಗಂಡನ ಹತ್ತಿರ ಕೆಲಸ ಮಾಡುತ್ತಿದ್ದ ಅಂದರೆ ಸರಿ. ನನ್ನ ಗಂಡ ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತಾರೆ ಅಂದರೆ ಸರಿ. ನನ್ನ ಗಂಡ ಮಾಡುತ್ತಿದ್ದ ರಿಯಲ್ ಎಸ್ಟೇಟ್ ವ್ಯಾಪಾರ ಆರೋಪಿ ಮಾತ್ರ ನೋಡುತ್ತಿರಲಿಲ್ಲ ಉಳಿದವರು ಸಹ ನೋಡುತ್ತಿದ್ದರು.

**2006** ರಲ್ಲಿ ನಾನು ಖರೀದಿಸಿದ ಜಾಗವನ್ನು ನನ್ನ ಗಂಡ ಕೊಡಿಸಿದ್ದಾರೆ ಅಂದರೆ ಸಾಕ್ಷಿ ಅದು ಆರೋಪಿಯ ಜಾಗ ಆಗಿದ್ದು ಅವನಿಂದ ನೇರವಾಗಿ ಖರೀದಿ ಮಾಡಿರುತ್ತೇನೆ. ನಾನು ಆರೋಪಿಯ ಜಾಗ ಖರೀದಿಸುವಾಗ ಆತನ ಮೂಲ ದಾಖಲೆಗಳನ್ನು ನೋಡಿಲ್ಲ. ಸಾಕ್ಷಿ ಮುಂದುವರೆದು ಜಾಗ ಸಹ ನೋಡಿಲ್ಲ ಅಂತಾ ನುಡಿಯುತ್ತಾರೆ. ನಾನು ಆರೋಪಿ ಕಡೆಯಿಂದ ಜಾಗದ ಮೂಲ ದಾಖಲಾತಿ, ಇ .ಸಿ. ಮತ್ತು ಜಾಗವನ್ನು ನೋಡಿರುತ್ತೇನೆ ಅಂದರೆ ಸರಿಯಲ್ಲ.

ನನ್ನ ಗಂಡ ಆರೋಪಿ ಕಡೆಯಿಂದ ಜಾಗದ ಮೂಲ ದಾಖಲಾತಿ, ಇ .ಸಿ. ಮತ್ತು ಜಾಗವನ್ನು ನೋಡಿರುತ್ತಾರೆ ಅಂದರೆ ಸರಿಯಲ್ಲ. ಈ ಪ್ರಕರಣದ ಆಸ್ತಿಯನ್ನು ನನ್ನ ಗಂಡ **21-10-2006** ರಂದು ಪರಶುರಾಮರಿಂದ ಖರೀದಿ ಮಾಡಿ ಆರೋಪಿಯ ಹೆಸರಿನಿಂದ ಮಾಡಿರುತ್ತಾರೆ ಅಂದರೆ ಸರಿಯಲ್ಲ.

ನನ್ನ ಗಂಡ ಮತ್ತು ಆರೋಪಿ ಮಧ್ಯೆ ವೈಮನಸ್ಸು ಆದ ಕಾರಣ ದಿಃ **14-11-2006** ರಲ್ಲಿ ಆರೋಪಿಯ ಹೆಸರಿನಿಂದ ನನ್ನ ಹೆಸರಿಗೆ ನನ್ನ ಗಂಡ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಈ ಪ್ರಕರಣದ ಆಸ್ತಿಯನ್ನು ನನ್ನ ಗಂಡನೇ ಆರೋಪಿಯ ಹೆಸರಿಗೆ ಖರೀದಿ ಮಾಡಿಸಿ ಆರೋಪಿಯ ಹೆಸರಿನಲ್ಲಿದ್ದ ಆಸ್ತಿಯನ್ನು ನನ್ನ ಗಂಡ ನನ್ನ ಹೆಸರಿಗೆ ಮಾಡಿದ್ದಾನೆ ಆರೋಪಿ ಯಾವುದೇ ಮೋಸ ಮಾಡಿಲ್ಲ ಅಂದರೆ ಸರಿಯಲ್ಲ.

ಸಿ. ಸಿ. ನಂ.- **2526/2019**

ಪಿ.ಡಬ್ಲ್ಯೂ- **1**

ನಾನು ಸಲ್ಲಿಸಿದ ಸಿವಿಲ್ ದಾವೆಯಲ್ಲಿ ಆರೋಪಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಈ ಪ್ರಕರಣದ ಆಸ್ತಿಯ ಬಗ್ಗೆ ನನಗೆ ವಸ್ತುಸ್ಥಿತಿ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ನನ್ನ ಗಂಡ ಹತ್ತಿರ ಕೆಲಸ ಮಾಡುತ್ತಿರುವಾಗ ಅವರ ಮಧ್ಯೆ ವೈಮನಸ್ಸು ಆದಕಾರಣ ಆರೋಪಿಯ ಮೇಲಿನ ಸಿಟ್ಟು ಇರುವ ಕಾರಣ ಈ ಸುಳ್ಳು ಕೇಸ್ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

**1995** ರಲ್ಲಿ ಕೇಶಪ್ಪನವರಿಂದ ಡಿ ವೆಂಕಟೇಶ ರವರಿಗೆ ಖರೀದಿ ಪತ್ರ ಆಗಿರುತ್ತದೆ ಅಂದರೆ ಗೊತ್ತಿಲ್ಲ. ನಂತರ ಜಂಬಣ್ಣಹಳ್ಳಿ ಪರಶುರಾಮ ಆಸ್ತಿ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ನಂತರ ನನ್ನ ಗಂಡ ಆರೋಪಿ ಹೆಸರಿನಿಂದ ಜಾಗವನ್ನು ಖರೀದಿ ಮಾಡಿಸಿ ನನ್ನ ಗಂಡನೇ ಆರೋಪಿಯ ಹೆಸರಿನಿಂದ ನನ್ನ ಹೆಸರಿಗೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಮೋಸ ಮಾಡಿಲ್ಲ, ನನಗೆ ರೂ. **5,00,000/-** ಹಣ ಮೋಸ ಮಾಡಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಸರಿಯಾಗಿ ತನಿಖೆ ಮಾಡಿ ಬಿ ವರದಿ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.